ನಷ್ಟದಲ್ಲಿರುವ ಸಹಕಾರ ಸಂಘಗಳ ವ್ಯವಹಾರ / ವಹಿವಾಟುವನ್ನು ಹೆಚ್ಚಿಸುವುದು. ವೆಚ್ಚಗಳನ್ನು ತಗ್ಗಿಸುವುದು.

ಅನಗತ್ಯ... ಸಿಬ್ಬಂದಿಯನ್ನು....ಕಡಿಮೆಗೊಳಿಸುವುದು, ಕಾರ್ಯದಕ್ಷತೆಯನ್ನು ಹೆಚ್ಚಿಸುವುದು.

ವಸೂಲಾತಿಯ ಪ್ರಕ್ರಿಯೆ ಪ್ರಮಾಣವನ್ನು ಹೆಚ್ಚಿಸುವ ಸೂಚನೆಗಳನ್ನು ನಷ್ಟದಲ್ಲಿರುವ ಸಹಕಾರ ಸಂಘಗಳಿಗೆ ನೀಡಲಾಗಿದೆ.

ಅನುದಾನ ಬಿಡುಗಡೆಗೆ ಬಾಕಿ ಇದ್ದ ಪ್ರಗತಿ ಕುಂಠಿತವಾಗಿರುವ ಬಗ್ಗೆ

297 (544) ಶ್ರೀ ರಮಾನಾಥ್ ರೈ ಬಿ (ಬಂಟ್ವಾಳ):–ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುಖ್ಯ ಮಂತ್ರಿಗಳ ಸಣ್ಣ ಹಾಗೂ ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ (ಸಿಎಂಎಸ್ಎಂಟಿಡಿಪಿ) ಈ ಯೋಜನೆಯಲ್ಲಿ ಬಂಟ್ವಾಳ ಕ್ಷೇತ್ರದ ಪುರಸಭೆಗೆ ನಿಗದಿಪಡಿಸಿದ ಅನುದಾನದ ಗುರಿಗಳೆಷ್ಟು;

ಆ) ಅನುದಾನ ಸಮರ್ಪಕವಾಗಿ ಬಿಡುಗಡೆಯಾಗದೇ ಇರುವುದರಿಂದ ಈ ಯೋಜನೆಯ ಪ್ರಗತಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ;

ಈ) ಇಲ್ಲದಿದ್ದಲ್ಲಿ, ಯಾವ ಹಂತದಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೋಳಿ (ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):–

ಅ) ಮುಖ್ಯಮಂತ್ರಿಗಳ ಸಣ್ಣ ಹಾಗೂ ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ (ಸಿಎಂಎಸ್ಎಂಟಿಡಿಪಿ) ಈ ಯೋಜನೆಯಲ್ಲಿ ಬಂಟ್ವಾಳ ಪುರಸಭೆಗೆ ನಿಗದಿಪಡಿಸಿರುವ ಅನುದಾನದ ರೂ. 500.00 ಲಕ್ಷಗಳು.;

ಆ) ಬಂಟ್ವಾಳ ಪುರಸಭೆಗೆ ನಿಗದಿಗೊಳಿಸಿರುವ ರೂ. 500.00 ಲಕ್ಷಗಳಲ್ಲಿ 26

ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿ. ರೂ. 333.20 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರದ ಮಾರ್ಗಸೂಚಿಯಂತೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ ಕೂಡಲೇ ಉಳಿದ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ನೈಸ್ ಕಂಪನಿಗೆ ಭೂಮಿಯನ್ನು ಮಾರಾಟ ಮಾಡಿರುವುದು

298 (484) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು):- ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಬೆಂಗಳೂರಿನ ರಾಜರಾಜೇಶ್ವರಿ ವಲಯ ವ್ಯಾಪ್ತಿಗೆ ಸೇರಿದ ಪಂತರಪಾಳ್ಯದ ಪ್ರಮೋದ್ ಲೇಔಟ್‌ನಲ್ಲಿ ಪ್ರಮೋದ ಗೃಹ ನಿರ್ಮಾಣ ಸಂಘದಿಂದ ಸರ್ವೆ ನಂ. 51, 53, 54/1, 54/2, 55/1, 55/2, 57/1, 57/2, 58ರಲ್ಲಿ ಹಾಗೂ ಹೊಸಕೆರೆಹಳ್ಳಿ ಸರ್ವೆ ನಂ. 72ರಲ್ಲಿನ ಭೂಮಿಯನ್ನು ಸರ್ಕಾರದಿಂದ ಭೂ ಪರಿವರ್ತನೆ ಮಾಡಿಸಿ, ಲೇಔಟ್ ನಿರ್ಮಿಸಿ ಸುಮಾರು 400 ನಿವೇಶನದಾರರು ಮನೆ ನಿರ್ಮಿಸಿಕೊಂಡು ವಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆದರೆ ಈಗ ಸರ್ಕಾರ ನೈಸ್ ಕಂಪನಿಗೆ ಕರ್ನಾಟಕ ಕೈಗಾರಿಕೆ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಹಸ್ತಾಂತರಿಸಲು ಅಧಿಸೂಚನೆಯ ಮೂಲಕ ಈ ಸರ್ವೆ ನಂ. ಭೂಮಿಯನ್ನು ಹಸ್ತಾಂತರಿಸಲು ಕ್ರಮ ಕೈಗೊಂಡಿರುವುದು ನಿಜವೇ;

ಇ) ಸ್ಥಳೀಯ ನಿವಾಸಿಗಳ ಆಕ್ಷೇಪಣೆ ಇದ್ದರೂ, ಸರ್ಕಾರ ನೈಸ್ ಕಂಪನಿಗೆ ಈ ಭೂಮಿಯನ್ನು ಮಾರಾಟ ಮಾಡಲು ಉದ್ದೇಶಿಸಿರುವುದು ನಿಜವೇ;

ಈ) ಇದರಿಂದಾಗಿ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗಿದ್ದು ಇವರ ರಕ್ಷಣೆಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ (ವಿವರ ಒದಗಿಸುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ:- (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.